‘ವೃಕ್ಷಲಕ್ಷ ಆಂದೋಲನ ಕರ್ನಾಟಕ’ದ ಸಮೀಕ್ಷಾ ವರದಿ

# ಶುಂಠಿಯಿಂದ ಮಲೆನಾಡಿಗೆ ಆಪತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲೆನಾಡಿನಲ್ಲಿ ಶುಂಠಿ ಬೆಳೆಗೆ ಅಪಾರ ಕ್ರಿಮಿನಾಶಕ ಬಳಕೆಯಿಂದ ಕೃಷಿಭೂಮಿ ಬಂಜರಾಗುವ ಮತ್ತು ಕುಡಿಯುವ ನೀರು ವಿಷಮಯವಾಗುತ್ತಿರುವ ಕುರಿತು ‘ವೃಕ್ಷಲಕ್ಷ ಆಂದೋಲನ ಕರ್ನಾಟಕ’ ಸಂಸ್ಥೆಯು ಬಿಡುಗಡೆ ಮಾಡಿದ ವಿಶೇಷ ಸಮೀಕ್ಷಾ ವರದಿಯಲ್ಲಿ ಆತಂಕಪಡಲಾಗಿದೆ.

ನಗರದಲ್ಲಿ ಭಾನುವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಂಸ್ಥೆಯ ಸಂಚಾಲಕ ಅನಂತ ಹೆಗಡೆ ಆಶೀಸರ, ‘ಸರ್ಕಾರ, ಜನಪ್ರತಿನಿಧಿಗಳು, ಸಹಕಾರಿ ಸಂಸ್ಥೆಗಳು ಈಗ ಸಮರೋಪಾದಿಯಲ್ಲಿ ಅಪಾಯಗಳನ್ನು ತಡೆಯಲು ಕಾರ್ಯತತ್ಪರವಾಗಬೇಕಿದೆ. ತಜ್ಞರ ಸಮಿತಿ ರಚಿಸಿ, ಮಲೆನಾಡಿನ ಪ್ರತಿ ತಾಲ್ಲೂಕಿನಲ್ಲಿ ಶುಂಠಿ ಬೆಳೆಯುವ ಪ್ರದೇಶದ ನಿಖರ ಮಾಹಿತಿಯನ್ನು ಸಂಗ್ರಹಿಸಬೇಕು. ನಿಷೇಧಿತ ಕ್ರಿಮಿನಾಶಕಗಳ ಮಾರಾಟ ತಡೆಯಬೇಕು. ಈಗ ಶುಂಠಿಯನ್ನು ಸಾವಯವ ಪದ್ಧತಿಯಲ್ಲಿ ಬೆಳೆಸಲು ಸರ್ಕಾರ ಕ್ರಮ ಕೈಗೊಳ್ಳಬೇಕು’ ಎಂದು ಒತ್ತಾಯಿಸಿದರು.

‘ಆರೋಗ್ಯ ಇಲಾಖೆಯು ಮಲೆನಾಡಿನಲ್ಲಿ ಬೆಳೆದ ಶುಂಠಿಯಲ್ಲಿ ಸೇರಿರುವ ವಿಷಕಾರಿ ರಾಸಾಯನಿಕಗಳ ಬಗ್ಗೆ ಪರೀಕ್ಷೆ ಮಾಡಬೇಕು. 60 ವರ್ಷಗಳ ಹಿಂದೆ ಜಾರಿಗೆ ತಂದಿರುವ ಕೀಟನಾಶಕಗಳ ಕಾಯ್ದೆಗೆ ತಿದ್ದುಪಡಿ ತರಬೇಕು’ ಎಂದು ಆಗ್ರಹಿಸಿದರು.

‘ಮಾಲಿನ್ಯ ನಿಯಂತ್ರಣ ಮಂಡಳಿಯು ಶುಂಠಿ ಬೆಳೆದಿರುವ ಮಲೆನಾಡಿನ ಸ್ಥಳಗಳ ನೀರು, ಮಣ್ಣು ಪರೀಕ್ಷೆ ಮಾಡಿಸಬೇಕು. ನಿಷೇಧಿತ ಕ್ರಿಮಿನಾಶಕಗಳು ಬೇರೆ ಬೇರೆ ಹೆಸರಿನಲ್ಲಿ ಮಾರಾಟವಾಗುವುದನ್ನು ತಪ್ಪಿಸಬೇಕು.

ಕೃಷಿ ಇಲಾಖೆ, ಆರೋಗ್ಯ ಇಲಾಖೆ ಹಾಗೂ ಪರಿಸರ ಇಲಾಖೆಗಳ ಉನ್ನತ ಅಧಿಕಾರಿಗಳ ಸಭೆ ಕರೆದು ಈ ಗಂಭೀರ ಸಮಸ್ಯೆಗೆ ಸರ್ಕಾರ ಪರಿಹಾರವನ್ನು ಸೂಚಿಸಬೇಕು’ ಎಂದರು.

## ಸಮೀಕ್ಷಾ ವರದಿಯ ಮುಖ್ಯ ಅಂಶಗಳು

ಶುಂಠಿಗೆ ಬಂದ ಬೆಲೆಯಿಂದ ಮಲೆನಾಡಿನಲ್ಲಿ ಶುಂಠಿ ಬೇಸಾಯ 100 ಪಟ್ಟು ಹೆಚ್ಚಾಗಿದೆ. ರೈತರು ಭತ್ತ ಬೆಳೆಯುವ ಗದ್ದೆಗಳಲ್ಲಿ ಶುಂಠಿ ಬೆಳೆಸಲು ಮುಂದಾಗಿದ್ದಾರೆ ಎಂದು ಸಮೀಕ್ಷೆ ತಿಳಿಸಿದೆ.

ಮಲೆನಾಡಿನ ಸುಮಾರು 75 ಸಾವಿರದಿಂದ 1 ಲಕ್ಷ ಎಕರೆ ಪ್ರದೇಶಗಳಲ್ಲಿ ಶುಂಠಿ ಬೆಳೆಯಲಾಗುತ್ತಿದೆ.ಮಲೆನಾಡಿನ ಪ್ರತಿ ತಾಲ್ಲೂಕಿನಲ್ಲಿ ಸರಾಸರಿ 5,000 ಎಕರೆ ಪ್ರದೇಶದಲ್ಲಿ ಶುಂಠಿಯನ್ನು ಬೆಳೆಯಲಾಗುತ್ತಿದೆ. ಪ್ರತಿ ತಾಲ್ಲೂಕಿನಲ್ಲಿ ಶುಂಠಿಗಾಗಿ ₹ 2 ಕೋಟಿಗಿಂತ ಹೆಚ್ಚು ಕ್ರಿಮಿನಾಶಕ ಮಾರಾಟವಾಗುತ್ತಿದೆ ಎಂದು ಮಾಹಿತಿ ನೀಡಿದೆ.

ಪಶ್ಚಿಮ ಘಟ್ಟದ ಕೊಡಗು, ಹಾಸನ, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಶುಂಠಿ ಬೆಳೆಯಿಂದ ಕೃಷಿ ಭೂಮಿ ಬಂಜರಾಗುತ್ತಿದೆ. ಪ್ರತಿ ತಾಲ್ಲೂಕಿನಲ್ಲಿ 100 ಎಕರೆ ಗಿಂತ ಹೆಚ್ಚು ಅರಣ್ಯ ಪ್ರದೇಶದಲ್ಲಿ ಶುಂಠಿಯನ್ನು ಬೆಳೆಯಲಾಗುತ್ತಿದೆ. ಕೇರಳದವರು ಮಲೆನಾಡಿನಲ್ಲಿ 1 ಎಕರೆಗೆ ₹ 30 ಸಾವಿರದಿಂದ 50 ಸಾವಿರದವರೆಗೆ ಶುಂಠಿಯನ್ನು ಬೆಳೆ ಯಲು ಭೂಮಿಯನ್ನು ಗುತ್ತಿಗೆ ಪಡೆಯುತ್ತಿರುವ ಕುರಿತು ವರದಿ ತಿಳಿಸಿದೆ.

**ಚಿಕ್ಕಮಗಳೂರು ಜಿಲ್ಲೆಯ ಅರಣ್ಯ ಪರಿಸ್ಥಿತಿ ವರದಿ:** ಇದೇ ಸಂದರ್ಭದಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯ ಪರಿಸರ ವಿಜ್ಞಾನ ಕೇಂದ್ರದ ಜೌಗು ಪ್ರದೇಶದ ಶಕ್ತಿ ಅಧ್ಯಯನ ವಿಭಾಗವು 2013–14 ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಅರಣ್ಯ ಪರಿಸ್ಥಿತಿ ಬಗ್ಗೆ ಕೈಗೊಂಡಿರುವ ಅಧ್ಯಯನ ವರದಿಯನ್ನು ಬಿಡುಗಡೆಗೊಳಿಸಿತು.

ಭಾರತೀಯ ವಿಜ್ಞಾನ ಸಂಸ್ಥೆಯ ವಿಜ್ಞಾನಿ ಡಾ.ಟಿ.ವಿ.ರಾಮಚಂದ್ರ ಈ ಕುರಿತು ಮಾತನಾಡಿ, ‘ಪಶ್ಚಿಮ ಘಟ್ಟಗಳ ಸಂರಕ್ಷಣೆ ಮುಖ್ಯವಾಗಿದೆ. ಅಲ್ಲಿ ಅರಣ್ಯವನ್ನು ಕಡಿದು, ಕಾಫಿ ಎಸ್ಟೇಟ್‌ಗಳು ತಲೆಯೆತ್ತಿವೆ. ಅರಣ್ಯವು ಕಡಿಮೆಯಾಗಿರುವುದರಿಂದ ಮಾನವ ಮತ್ತು ಪ್ರಾಣಿಗಳ ಸಂಘರ್ಷ ಹೆಚ್ಚಾಗಿದೆ’ ಎಂದರು.

‘ಚಿಕ್ಕಮಗಳೂರು ಜಿಲ್ಲೆಯಲ್ಲಿ 22 ಸಾವಿರ ಹೆಕ್ಟೇರ್ ಅರಣ್ಯ ಪ್ರದೇಶವು ಅತಿಕ್ರಮಣವಾಗಿದೆ. ಇದರಿಂದ ನೀರಿನ ಮೂಲಗಳ ಸೆಲೆಗಳು ಬತ್ತಿಹೋಗುತ್ತಿವೆ. ಸ್ಥಳೀಯ ಅನೇಕ ಪ್ರಭೇದಗಳು ಮರೆಯಾಗುತ್ತಿವೆ’ ಎಂದು ಆತಂಕ ವ್ಯಕ್ತಪಡಿಸಿದರು.

## ಚಿಕ್ಕಮಗಳೂರು ಜಿಲ್ಲೆಯ ಅಧ್ಯಯನದ ವರದಿ

ಚಿಕ್ಕಮಗಳೂರು ಜಿಲ್ಲೆಯ ನದಿಗಳು, ಹವಾಮಾನ, ಸಸ್ಯವರ್ಗ, ವನ್ಯಜೀವಿ, ಅದಿರು, ಭೂ ಪರಿಸ್ಥಿತಿ, ಭೂಮಿ ಉಪಯೋಗ, ಅರಣ್ಯ ಅತಿಕ್ರಮಣ ಸ್ಥಿತಿ, ಕೀಟಗಳು, ಶೋಲಾ ಹುಲ್ಲುಗಾವಲು ಪರಿಸ್ಥಿತಿ, ಮಾನವ ಪ್ರಾಣಿ ಸಂಘರ್ಷ ಮುಂತಾದ ವಿಷಯಗಳನ್ನು ಅರಣ್ಯ ಪರಿಸ್ಥಿತಿ ಅಧ್ಯಯನ ವರದಿಯು ಒಳಗೊಂಡಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ 200 ಜಾತಿಯ ಸಸ್ಯವರ್ಗ ಅಪಾಯದ ಅಂಚಿನಲ್ಲಿವೆ. ಅವುಗಳಲ್ಲಿ 400 ಜಾತಿಯ ಔಷಧಿ ಸಸ್ಯಗಳಿವೆ. ಕುದುರೆಮುಖದಲ್ಲಿ 2,500 ಹೂ ಬಿಡುವ ಸಸ್ಯ ಜಾತಿಗಳಿವೆ.

ಜಿಲ್ಲೆಯ ವಿವಿಧ ಜಾತಿಗಳ ಗಿಡಗಳಲ್ಲಿ ಶೇ 31 ರಷ್ಟು ವಿನಾಶದ ಅಂಚಿನಲ್ಲಿವೆ ಎಂದು ವರದಿ ಹೇಳಿದೆ.ಶೋಲಾ ಹುಲ್ಲುಗಾವಲು ಅರಣ್ಯಗಳು ಇಡೀ ಪಶ್ಚಿಮ ಘಟ್ಟಕ್ಕೆ ಅಪರೂಪದ್ದಾಗಿವೆ.

ಹೀಗಾಗಿ, ಈ ಶೋಲಾ ಕಾಡುಗಳ ಉಳಿವಿಗೆ ನಿರ್ದಿಷ್ಟ ಕ್ರಮಬೇಕು. ಏಕಜಾತಿ ನೆಡುತೋಪು ನಿರ್ಮಾಣದಿಂದ ಶೋಲಾ ಹುಲ್ಲುಗಾವಲು ಪ್ರದೇಶಕ್ಕೆ ಹಾನಿಯಾಗಲಿದೆ ಎಂದು ವರದಿ ಸ್ಪಷ್ಟವಾಗಿ ತಿಳಿಸಿದೆ.

ಚಿಕ್ಕಮಗಳೂರು ಜಿಲ್ಲೆಯ ಒಟ್ಟು ಭೂ ವಿಸ್ತೀರ್ಣದಲ್ಲಿ ಶೇ 39 ರಷ್ಟು ಅರಣ್ಯ ಪ್ರದೇಶವಿದೆ. ಚಿಕ್ಕಮಗಳೂರು ಅರಣ್ಯ ಭಾಗದಲ್ಲಿ 28,047 ಹೆಕ್ಟೇರ್ ಸಿ ಮತ್ತು ಡಿ ವರ್ಗದ ಭೂಮಿಯಿದೆ. ಇಲ್ಲಿ ನೈಸರ್ಗಿಕ ಅರಣ್ಯ ಪ್ರದೇಶವಿದೆ.

4,903 ಅರಣ್ಯ ಅತಿಕ್ರಮಣವಾಗಿರುವ ಕುರಿತು ವರದಿ ಉಲ್ಲೇಖಿಸಿದೆ.ಕೊಪ್ಪ ಅರಣ್ಯ ವಿಭಾಗದಲ್ಲಿ 63,247 ಅರಣ್ಯ ಪ್ರದೇಶರವೆನ್ನೂ ವ್ಯಾಪ್ತಿಯಲ್ಲಿದೆ.

ಇವು ದಟ್ಟ ಅರಣ್ಯಗಳಾಗಿದ್ದು, 8,014 ಹೆಕ್ಟೇರ್ ಅರಣ್ಯ ಪ್ರದೇಶವು ಅತಿಕ್ರಮಣವಾಗಿರುವ ಕುರಿತು ವರದಿ ತಿಳಿಸಿದೆ